## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮಡಿಕೇರಿ-ಕೊಡಗು

## ಸ್ಪೆಷಲ್(ಕರಪ್ಷನ್) ಕೇಸ್ ಸಂಖ್ಯೆ: 61/2016

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಮಂಗಳಲಕ್ಷ್ಮಿ | ಫ್ರಾಸಾಃ 3 |
| ಗಂಡನ ಹೆಸರು | : | ರಾಮೇಗೌಡ | ಚಾಸಾಃ 3 |
| ವಯಸ್ಸು | : | 61 ವರ್ಷ | |
| ವೃತ್ತಿ | : | ನಿವೃತ್ತ ಪ್ರಥಮ ದರ್ಜೆ ಸಹಾಯಕರು, ಉಪ-ಅರಣ್ಯ ಸಂರಕ್ಷಣಾಧಿಕಾರಿ ಕಛೇರಿ ನಗರ ಸಾಮಾಜಿಕ ಅರಣ್ಯ ವಿಭಾಗ, ಬೆಂಗಳೂರು | |
| ವಾಸ | : | ಬೆಂಗಳೂರು. | |

ಸಾಕ್ಷಿಯನ್ನು ದಿನಾಂಕ **28-07-2023** ರಂದು ಕರೆಯಿಸಿ ಪ್ರಮಾಣ ವಚನ **ಭೋಧಿಸಲಾಯಿತು.**

<u>ಮುಖ್ಯವಿಚಾರಣೆ: ಸರ್ಕಾರಿ ಅಭಿಯೋಜಕರಿಂದ:</u>

ನಾನು 2012 ರಿಂದ 2015 ರವರಗೆ ಉಪ-ಅರಣ್ಯ ಸಂರಕ್ಷಣಾಧಿಕಾರಿ ಕಛೇರಿ ನಗರ ವಿಭಾಗ, ಅರಣ್ಯಭವನ, ಬೆಂಗಳೂರಿನಲ್ಲಿ ಪ್ರಥಮ ದರ್ಜೆ ಸಹಾಯಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ನನಗೆ ಫ್ರಾಸಾ-2 ಬಿ.ಡಿ. ರಮೇಶ್ ರವರು ಗೊತ್ತು. ದಿನಾಂಕ 23-05-2013 ರಂದು ಲೋಕಾಯುಕ್ತ ಕಛೇರಿಯಿಂದ ಉಪ-ಅರಣ್ಯ ಸಂರಕ್ಷಣಾಧಿಕಾರಿರವರಿಗೆ ಕರೆ ಬಂತು ಅವರು ನನಗೆ ಮೌಖಿಕವಾಗಿ ಸಂಜೆ 5 ಗಂಟೆಗೆ ಲೋಕಾಯುಕ್ತ ಕಛೇರಿಯಲ್ಲಿ ವರದಿ ಮಾಡಿಕೊಳ್ಳಿ ಎಂದು ತಿಳಿಸಿದರು. ನನ್ನ ಜೊತೆ ಫ್ರಾಸಾ-2 ರವರು ಸಹ ಬಂದರು. ನಾನು ದುರ್ಗಯ್ಯ ಡಿವೈಎಸ್ ಪಿ ರವರನ್ನು ಲೋಕಾಯುಕ್ತ ಕಛೇರಿಯಲ್ಲಿ ಭೇಟಿ ಮಾಡಿದೆನು. ಅವರು ನನಗೆ ನಾಳೆ ಬೆಳಿಗ್ಗೆ 5 ರಿಂದ 5.30 ಗಂಟೆ ಸಮಯಕ್ಕೆ ನಮ್ಮ ಕಛೇರಿಗೆ ಬನ್ನಿ ಎಂದು ತಿಳಿಸಿದರು. ನಾನು ಮಾರನೇ ದಿನ ಅಲ್ಲಿಗೆ ಹೋಗಿ ವರದಿ ಮಾಡಿಕೊಂಡೆನು. ನನ್ನನ್ನು ಆರೋಪಿರವರ ಮನೆ ಬಳಿ ಕರೆದುಕೊಂಡು ಹೋದರು. ಆರೋಪಿ ಮನೆಯಲ್ಲಿ ಇರಲಿಲ್ಲ. ಅವರ ಮನೆಯಲ್ಲಿ ಇದ್ದ ಕೆಲಸಗಾರರನ್ನು ಕೇಳಿದಾಗ ಆರೋಪಿ ಬರಲು 3-4 ದಿವಸ ಆಗುತ್ತದೆ ಎಂದು ತಿಳಿಸಿದರು. ಆ ಮನೆಯ cellar ನಲ್ಲಿ ಒಂದು Alto car, Activa Honda scooter,

ಒಂದು ಸೈಕಲ್ ಇದ್ದವು. ಅವುಗಳ ಬಗ್ಗೆ ಪಂಚನಾಮೆ ಮಾಡಿದರು ಮತ್ತು ನನ್ನ ಸಹಿ ತೆಗೆದುಕೊಂಡರು. ಪಂಚನಾಮೆಯನ್ನು ನಿಪಿ-2 ಎಂದು ಈಗಾಗಲೇ ಗುರುತಿಸಲಾಗಿದ್ದು, ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ**-2(ಡಿ)** ಎಂದು ಗುರುತಿಸಲಾಯಿತು. ಆ ಮನೆಯ ground floor ಅನ್ನು ಮೊಹರು ಮಾಡಿ ಅಲ್ಲಿಗೆ ಸಿಬ್ಬಂದಿ ನೇಮಿಸಿದರು. ಮತ್ತೆ ನಿಮಗೆ ದಿನಾಂಕ ತಿಳಿಸುತ್ತೇವೆ ನೀವು ಬರಬೇಕು ಎಂದು ತಿಳಿಸಿದರು. ದಿನಾಂಕ 30-09-2013 ರಂದು ಪುನಃ ನನಗೆ ಕರೆ ಮಾಡಿದರು. ನಾನು ಮತ್ತು ಚಾಸಾ-2 ರವರು ಲೋಕಾಯುಕ್ತ ಕಛೇರಿಗೆ ಬೆಳಿಗ್ಗೆ 9.30 ಗೆ ಹೋದೆವು. ಅವರು ನನ್ನನ್ನು ಮತ್ತು ಇತರೆಯವರನ್ನು ಆರೋಪಿತನ ಮನೆಯ ಬಳಿ ಕರೆದುಕೊಂಡು ಹೋದರು. ಲೋಕಾಯುಕ್ತ ಪೊಲೀಸಿನವರು ಆರೋಪಿಗೆ ಶೋಧನಾ ವಾರೆಂಟ್‌ಅನ್ನು ತೋರಿಸಿದರು. ಶೋಧನಾ ವಾರೆಂಟ್‌ಅನ್ನು ನಿಪಿ-3 ಎಂದು ಈಗಾಗಲೇ ಗುರುತಿಸಲಾಗಿದ್ದು, ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ**-3(ಡಿ)** ಎಂದು ಗುರುತಿಸಲಾಯಿತು. ನಂತರ ಮನೆಗೆ ಮಾಡಿದ್ದ ಮೊಹರನ್ನು ತೆಗೆದು ಮನೆ ಒಳಗೆ ಹೋಗಿ ಶೋಧನ ಕಾರ್ಯ ಪ್ರಾರಂಭಿಸಿದೆವು. ಆ ಮನೆಯು Cellar, Ground floor, First floor ಮತ್ತು Second floor ನಿಂದ ಕೂಡಿತ್ತು. ಮೊದಲು Ground floor, First floor, Second floor ನಂತರ Second floor ಮೇಲು ಸಹ ಶೋಧನೆ ಮಾಡಿದರು. ಅಲ್ಲಿದ್ದ ವಸ್ತುಗಳ ಅಂದಾಜು ಮೌಲ್ಯವನ್ನು ಮಾಡಿದರು. ಬಹಳ ವರ್ಷ ಆಗಿರುವುದರಿಂದ ಅದರ ಮೌಲ್ಯ ಎಷ್ಟು ಎಂದು ನನಗೆ ಈಗ ನೆನಪಿಲ್ಲ. ಆ ದಿನ ತೆಗೆದುಕೊಂಡಂತಹ ದಾಖಲಾತಿಗಳನ್ನು ಈಗಾಗಲೇ ನಿಪಿ-4 ರಿಂದ ನಿಪಿ-99 ಮತ್ತು ನಿಪಿ-103 ರಿಂದ ನಿಪಿ-186 ಎಂದು ಗುರುತಿಸಲಾಗಿದೆ. ಆ ದಾಖಲಾತಿಗಳು ಈಗ ನ್ಯಾಯಾಲಯದ ಮುಂದೆ ಇವೆ. ದಾಖಲಾತಿಗಳನ್ನು ತೆಗೆದುಕೊಂಡ ಬಗ್ಗೆ ಪಂಚನಾಮೆಯನ್ನು ಮಾಡಿದರು. ಶೋಧನ ಪಂಚನಾಮೆಯನ್ನು ಈಗಾಗಲೇ ನಿಪಿ-100 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಗಳು ಎಲ್ಲಾ ಪುಟಗಳಲ್ಲಿ ಇವೆ, ಒಂದು ಸಹಿಯನ್ನು ನಿಪಿ**-100(ಸಿ)** ಎಂದು ಗುರುತಿಸಲಾಯಿತು. ನಂತರ ಹೆಚ್.ಎಸ್.ಆರ್ ಲೇಔಟ್ ನ SBM ಬ್ಯಾಂಕಿನ ಬಳಿ ಹೋದೆವು. ಅಲ್ಲಿ ಆರೋಪಿಯ ಹೆಂಡತಿ ಇಂದಿರಾ ಹೆಸರಿನಲ್ಲಿ ಲಾಕರ್ ಇತ್ತು. ಮ್ಯಾನೇಜರ್ ಅವರಿಗೆ ಪತ್ರ ತೋರಿಸಿ ಲಾಕರ್ ನಲ್ಲಿ ಸುಮಾರು 26 ವಸ್ತುಗಳು ಇದ್ದವು, ಅವುಗಳ ಬಗ್ಗೆ ಸಹ ಪಂಚನಾಮೆ ಮಾಡಿದರು. ಸುಮಾರು 588 ಗ್ರಾಂ ಮೌಲ್ಯ ಚಿನ್ನದ ಆಭರಣಗಳು ಇದ್ದವು. ಅಕ್ಕಸಾಲಿಗರು ಚಿನ್ನ ಎಂದು ತಿಳಿಸಿದರು. ಲಾಕರ್ ಶೋಧನ ಪಂಚನಾಮೆಯನ್ನು ನಿಪಿ-101 ಎಂದು ಈಗಾಗಲೇ

ಗುರುತಿಸಲಾಗಿತ್ತು, ಅದರ ಮೇಲೆ ಇರುವ ಸಾಕ್ಷಿಯ ಒಂದು ಸಹಿಯನ್ನು ನಿಪಿ-**101(ಇ)** ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಲಾಕರ್ ಗೆ ಸಂಬಂಧಿಸಿದಂತೆ ಯಾರು operate ಮಾಡುತ್ತಾರೆ ಎಂಬ ಬಗ್ಗೆ ಇರುವ ವಿವರವನ್ನು ಈಗಾಗಲೇ ನಿಪಿ-102 ಎಂದು ಗುರುತಿಸಲಾಗಿದ್ದು, ಅದರ ಮೇಲೆ ಇರುವ ಸಾಕ್ಷಿಯನ್ನು ಸಹಿಯನ್ನು ನಿಪಿ-**102(ಸಿ)** ಎಂದು ಗುರುತಿಸಲಾಯಿತು. ಆ ದಿನ ಲಾಕರ್ ನಲ್ಲಿ ಇದ್ದಂತಹ ಬಂಗಾರಗಳನ್ನು ಈಗಾಗಲೇ ಮು.ಮಾ-1 ರಿಂದ ಮು.ಮಾ-26 ಎಂದು ಗುರುತಿಸಲಾಗಿದೆ.

**ಪಾಟೀಸವಾಲು- ಆರೋಪಿ ಪರ ವಕೀಲರಿಂದ:**

ನಾನು ಈ ಕೇಸಿಗೆ ಅಲ್ಲದೆ ಬೇರೆ ಲೋಕಾಯುಕ್ತ ಕೇಸುಗಳಿಗೆ ಪಂಚರಾಗಿ ಇರುವುದಿಲ್ಲ. ವಸ್ತುಗಳಿಗೆ ಲೋಕಾಯುಕ್ತ ಅಧಿಕಾರಿಗಳು ಅಂದಾಜು ಬೆಲೆಯನ್ನು ತಿಳಿಸಿದರು. ನಾನು ಮೌಲ್ಯಗಳ ಬಗ್ಗೆ ನನ್ನ ಅಭಿಪ್ರಾಯವನ್ನು ತಿಳಿಸಲಿಲ್ಲ. ದಾಖಲಾತಿಗಳಲ್ಲಿ ಇರುವ ವಿವರಗಳನ್ನು ನಾನು ಹೇಳಲು ಆಗುವುದಿಲ್ಲ. ನನ್ನ ಸಮ್ಮುಖದಲ್ಲಿ ಆರೋಪಿಯನ್ನು ವಸ್ತುಗಳು ಹೇಗೆ ಬಂದವು ಎಂಬ ಬಗ್ಗೆ ಲೋಕಾಯುಕ್ತ ಪೊಲೀಸಿನವರು ವಿಚಾರಿಸಲಿಲ್ಲ. ನಾನು ಸರ್ಕಾರಿ ಅಧಿಕಾರಿ ಆಗಿದ್ದು, ಲೋಕಾಯುಕ್ತ ಪರವಾಗಿ ಸಾಕ್ಷಿ ಹೇಳದಿದ್ದರೆ ನನಗೆ ತೊಂದರೆ ಆಗುತ್ತದೆ ಎಂದು ನಾನು ಸುಳ್ಳು ಸಾಕ್ಷಿ ಹೇಳುತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸಿನವರು ಒತ್ತಾಯದ ಮೇರೆಗೆ ಮಹಜರ್ ಗಳಿಗೆ ತಿಳಿದುಕೊಳ್ಳದೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸಾ. ಸ. ಇ. ಎ. ಒ.

ಸಹಿ/-

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮಡಿಕೇರಿ- ಕೊಡಗು.